ಪ್ರೌಢಶಾಲಾ, ಕಿರಿಯ ಕಾಲೇಜು, ಗ್ರಂಥಪಾಲಕ ಸಹಾಯಕರ ವೇತನದ ಬಗ್ಗೆ

1210 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) ಹೆಚ್.ಎಂ. ರೇವಣ್ಣ (ಮಾಗಡಿ): ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1985ರ ಪರಿಷ್ಕರಣ (ಅನಾಮಲಿ) ವೇತನ ಸಮಿತಿಯಿಂದ ಸಾರ್ವಜನಿಕ ಗ್ರಂಥಾಲಯ ಸಹಾಯಕರಿಗೂ ಮತ್ತು ಪ್ರೌಢಶಾಲಾ ಕಿರಿಯ ಕಾಲೇಜು ಗ್ರಂಥಾಪಾಲಕ ಸಹಾಯಕರಿಗೂ ಮಧ್ಯೆ ಇರುವ ವೇತನ ತಾರತಮ್ಯದ ನಿವಾರಣೆಯ ಬಗ್ಗೆ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ?

ಆ) ಸಲ್ಲಿಸಿದ್ದಲ್ಲಿ, ಸರ್ಕಾರ ಈ ವರದಿಯ ಬಗ್ಗೆ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಶಿಕ್ಷಕರ ವರ್ಗಾವಣೆ ಕುರಿತು

1214 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 1990 ಸಾಮಾನ್ಯ ವರ್ಗಾವಣೆಯಿಂದಿಡಿದು ಇಲ್ಲಿಯ ತನಕ ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲೆಗಳಿಗೆ ವರ್ಗಾವಣೆಯಾದ ಶಿಕ್ಷಕರ ಸಂಖ್ಯೆ ಏನು?

ಆ) ಈ ಮೇಲ್ಕಂಡ ಜಿಲ್ಲೆಗಳಿಂದ ವರ್ಗಾವಣೆ ಆಗಿ ಹೊರಗಡೆ ಹೋಗಿರುವ ಶಿಕ್ಷಕರ ಸಂಖ್ಯೆ ಎಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು)

ಅ)	ಪ್ರಾಥಮಿಕ ಶಿಕ್ಷಣ	ಪ್ರೌಢ ಶಿಕ್ಷಣ
ಬೆಂಗಳೂರು ಉತ್ತರ ಜಿಲ್ಲೆ	121	46
ಬೆಂಗಳೂರು ದಕ್ಷಿಣ ಜಿಲ್ಲೆ	318	
ಒಟ್ಟು	439	
ಆ) ಬೆಂಗಳೂರು ಉತ್ತರ ಜಿಲ್ಲೆ	05	06
ಬೆಂಗಳೂರು ದಕ್ಷಿಣ ಜಿಲ್ಲೆ	26	
ಒಟ್ಟು	31	

ರಾಜ್ಯದಲ್ಲಿರುವ ಖಾಸಗಿ ಶಾಲೆಗಳ ಸಂಖ್ಯೆ

1209 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) , ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಖಾಸಗಿ ಶಾಲೆಗಳಿವೆ?

ಆ) ಇದರಲ್ಲಿ ಅನುದಾನಿತ ಶಾಲೆಗಳೆಷ್ಟು?

ಇ) ಅನುದಾನರಹಿತ ಶಾಲೆಗಳೆಷ್ಟು?

ಈ) ಅನುದಾನ ಸಂಹಿತೆ ನಿಯಮದಂತೆ ಎಷ್ಟು ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ?